ವ್ಯವಸ್ಥೆಯನ್ನು ತರತಕ್ಕ ದಿಕ್ಕಿನಲ್ಲಿ ಸಾಗುತ್ತಿದ್ದೇವೆ. ಇಲ್ಲಿ ಇರುವ ನ್ಯೂನತೆಗಳು ಏನು ಇವೆ, ಇವುಗಳನ್ನು ಸುಧಾರಿಸುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತಿದ್ದೇವೆ. ಕೂಪನ್ ಸಿಸ್ಟಂನ್ನು ನಾವು ತರುತ್ತಿದ್ದೇವೆ. ಪ್ರತಿಯೊಂದು ಜಿಲ್ಲೆಯಲ್ಲೂ ಬಿಲೋ ದಿ ಪಾವರ್ಟಿ ಲೈನ್ ಇರತಕ್ಕ ಜನತೆಯನ್ನು ಇವರುಗಳು ಹುಡುಕುವುದಕ್ಕೆ ಗ್ರಾಮಸಭೆಗಳನ್ನು ಮಾಡಿ ಯಾರು ಬಿಲೊ ದಿ ಪಾವರ್ಟಿ ಲೈನ್‌ನಲ್ಲಿವ್ದಾರೋ ಅವರನ್ನು ಹುಡುಕುವುದಕ್ಕೆ ಆದೇಶ ಕೂಡ ಸರ್ಕಾರದಿಂದ ಹೋಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಆ ಒಂದು ಜನತೆಯನ್ನು ಹುಡುಕಿ ಇವತ್ತು ಕಡಿಮೆ ದರದಲ್ಲಿ ಆಹಾರಧಾನ್ಯಗಳನ್ನು ವಿತರಣೆ ಮಾಡತಕ್ಕ ಕಾರ್ಯ ಕೂಡ ರಾಜ್ಯಸರ್ಕಾರದಿಂದ ನಡೆದಿದೆ ಎನ್ನುವುದನ್ನು ಸನ್ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಪ್ರತಿಯೊಂದು ಜಿಲ್ಲೆಯಲ್ಲೂ ಅದಷ್ಟು ಬೇಗನೆ ಅವರನ್ನು ಹುಡುಕುವ ವ್ಯವಸ್ಥೆಯನ್ನು ಮಾಡಬೇಕಾದ ಒಂದು ಅವಶ್ಯಕತೆ ಇದೆ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ನಾನು ಏನು ಕೇಳಿದ್ದೇನೋ ಅದನ್ನು ಬಿಟ್ಟು ಅದಕ್ಕೆ ತದ್ವಿರುದ್ಧವಾಗಿ ಮತ್ತೆಲ್ಲಾ ಅವರು ಹೇಳುತ್ತಿದ್ದಾರೆ. ಅವರು ಬಿಪಿಎಲ್ ಲಿಸ್ಟನ್ನು ಮಾಡುವುದಿಲ್ಲ, ಅವರ ಇಲಾಖೆಯವರ ಜೊತೆ ರೆವಿನ್ಯೂ ಇಲಾಖೆಯವರು ಸಹಕರಿಸುತ್ತಿಲ್ಲ. ಬೀಲೊ ದಿ ಪಾವರ್ಟಿ ಲಿಸ್ಟನ್ನು ಕೂಡ ಅವರು ಮಾಡಲಿಲ್ಲ, ಅವರಿಗೆ ಆಹಾರಧಾನ್ಯಗಳನ್ನು ಹಂಚುವುದಕ್ಕೂ ಕೂಡ ಆಗುವುದಿಲ್ಲ. ಅವರ ಅಧಿಕಾರಿಗಳನ್ನು ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳಲಿಲ್ಲ. ಅವರ ಇಲಾಖೆ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಗ್ರಾಮೀಣ ಪ್ರದೇಶದ ಬಡವರಿಗೆ ಅಕ್ಕಿ ಸಕ್ಕರೆ ಪಡಿತರವನ್ನು ಹಂಚುವುದರಲ್ಲಿ ಸರ್ಕಾರ ವಿಫಲವಾಗಿದೆ. ಇದನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಆರಗ ಜ್ಞಾನೇಂದ್ರರವರು ಈ ಹಂತದಲ್ಲಿ ಸಭಾತ್ಯಾಗ ಮಾಡಿದರು.)

ಶ್ರೀ ಡಿ.ಬಿ. ಇನಾಮದಾರ್: ನ್ಯಾಯಬೆಲೆ ಅಂಗಡಿಗಳು ಸರಿಯಾಗಿ ನಡೆದಿಲ್ಲ ಎನ್ನುವುದರ ಬಗ್ಗೆ ನೀವು ಕಂಪ್ಲೇಂಟನ್ನು ಕೊಟ್ಟಿರುವ ಬಗ್ಗೆ ವಿವರಗಳನ್ನು ಕೊಡಬೇಕು. ಸುಮ್ಮನೆ ಸರಿಯಾಗಿ ನಡೆದಿಲ್ಲ ಎಂದು ಹೇಳುವುದು ಸರಿಯಲ್ಲ.

ವಿಷಯ: (v) ಕೊಪ್ಪಳದ ಎರಡು ರಸ್ತೆಗಳ ಅಗಲೀಕರಣ

ಶ್ರೀ ಕರಡಿ ಸಂಗಣ್ಣ (ಕೊಪ್ಪಳ): ಮಾನ್ಯ ಅಧ್ಯಕ್ಷರೇ, ಕೊಪ್ಪಳದಲ್ಲಿ ಎರಡು ರಸ್ತೆಗಳನ್ನು ಅಗಲೀಕರಣ ಮಾಡುವ ಬಗ್ಗೆ.

ಛೇರ್ಮನ್: ಯಾವ ವಿಚಾರದ ಮೇಲೆ ನೀವು ಮಾತನಾಡಿದರೆ, ಯಾವ ಸಚಿವರು ನಿಮಗೆ ಉತ್ತರವನ್ನು ಕೊಡಬೇಕು?

ಶ್ರೀ ಕರಡಿ ಸಂಗಣ್ಣ: ಮಾನ್ಯ ಚಿಮ್ಮನಕಟ್ಟಿಯವರು.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ): ಮಾನ್ಯ ಅಧ್ಯಕ್ಷರೇ, ಒಂದು ಪ್ರಶ್ನೆಯನ್ನು ಅವರು ಎತ್ತಿದ್ದಾರೆ, ಕೊಪ್ಪಳ ಜಿಲ್ಲಾ ಕೇಂದ್ರದಲ್ಲಿ ರಸ್ತೆಗಳನ್ನು ಅಗಲ ಮಾಡಬೇಕೆಂದು ಹೇಳಿ ಅಲ್ಲಿ ಪುರಸಭೆಯವರು ಮತ್ತು ಜಿಲ್ಲಾಡಳಿತದವರು ಮನೆಗಳನ್ನು ಬೀಳಿಸುತ್ತಿದ್ದಾರೆ. ಅಲ್ಲಿಯ

ಜಿಲ್ಲಾಧಿಕಾರಿಗಳು ಮಾಡಿರತಕ್ಕ ಕ್ರಮಕ್ಕೆ ಇವರು ಸಹಿತ ಸಹಕಾರವನ್ನು ಕೊಟ್ಟಿದ್ದಾರೆ. ರಸ್ತೆಯ ಅಗಲೀಕರಣದ ಬಗ್ಗೆ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಒಂದು ಪ್ರಸ್ತಾವನೆಯನ್ನು ಕಳುಹಿಸಿ ಸುಮಾರು ಒಂದು ಕೋಟಿ ರೂಪಾಯಿಗಳು ಪರಿಹಾರವನ್ನು ಕೊಡಲು ಬೇಕಾಗುತ್ತದೆ, ಎಂದು ಅವರು ತಿಳಿಸಿದ್ದಾರೆ. ಕೆಲವು ಮನೆಗಳನ್ನು ಕಿತ್ತುಹಾಕಿದ್ದೇವೆಂದು ಸಹ ಹೇಳಿದ್ದಾರೆ. ಅದರಿಂದಾಗಿ ಪರಿಹಾರದ ಹಣವನ್ನು ರಿಲೀಸ್ ಮಾಡಬೇಕು ಎನ್ನುವ ದೃಷ್ಟಿಯಿಂದ ಮುಖ್ಯಮಂತ್ರಿಗಳಿಗೂ ಹೋಗಿ ಪತ್ರವನ್ನು ಕೂಡ ಕೊಟ್ಟಿದ್ದಾರೆ. ತಮಗೂ ಸಹಿತ ಹೇಳಿದ್ದಾರೆ. ಈ ಸದನದಲ್ಲಿ ಅವರು ಪ್ರಸ್ತಾವನೆ ಮಾಡಿದ್ದಾರೆ. ಅದಕ್ಕಾಗಿ ಒಂದು ಉತ್ತರವನ್ನು ಕೊಡಿ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

ಶ್ರೀ ಕರಡಿ ಸಂಗಣ್ಣ: ಜಿಲ್ಲಾಧಿಕಾರಿಗಳ ಹತ್ತಿರ ದುಡ್ಡು ಇದೆಯೋ? ಅಥವಾ ನೀವೇ ದುಡ್ಡನ್ನು ರಿಲೀಸ್ ಮಾಡುತ್ತೀರೋ? ದುಡ್ಡನ್ನು ತಾವು ರಿಲೀಸ್ ಮಾಡಬೇಕಾಗುತ್ತದೆ. ಏಕೆಂದರೆ ಸಾರ್ವಜನಿಕರಿಗೆ ಅಲ್ಲಿ ತೊಂದರೆಯಾಗುತ್ತಿದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ(ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಅವರು ಪುರಸಭೆ ವ್ಯಾಪ್ತಿಯಲ್ಲಿ ಮಾಡಿರುವ ಕೆಲಸಕ್ಕೆ ಸುಮಾರು 3-4 ಕೋಟಿ ರೂಪಾಯಿಗಳ ಪರಿಹಾರವನ್ನು ಕೊಡುವುದಕ್ಕೆ ಆಗದೇ ಹೋಗಬಹುದು ಎನ್ನುವ ದೃಷ್ಟಿಯಲ್ಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಜಿಲ್ಲಾಧಿಕಾರಿಗಳು ಸ್ವತಃ ಅವರೇ ಈ ಕೆಲಸವನ್ನು ಮಾಡಿಸುತ್ತಿದ್ದಾರೆ. ಜಿಲ್ಲಾ ಆಡಳಿತದವರು ಮಾಡಿಸುತ್ತಿದ್ದಾರೆ. ಬರೀ ಪುರಸಭೆಯವರಲ್ಲ. ನಾನೇ ಪ್ರಸ್ತಾವನೆಯನ್ನು ನೋಡಿದ್ದೇನೆ. ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಕಳುಹಿಸಿರತಕ್ಕ ಪ್ರಸ್ತಾವನೆಯನ್ನು ನಾನೇ ನೋಡಿದ್ದೇನೆ. ಅದಕ್ಕೆ ಹಣವನ್ನು ಬಿಡುಗಡೆ ಮಾಡಬೇಕೆಂದು ಹೇಳಿದ್ದಾರೆ. ಅದನ್ನು ಪರಿಶೀಲನೆ ಮಾಡಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ: ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಭೈರೇಗೌಡ: ಬಹಳ ಸಾರಿ ಇದನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿ ಏನೂ ಕೂಡ ಮಾಡಿಲ್ಲ. ತಾವು ದಯವಿಟ್ಟು ಅವರು ಏನು ಪ್ರಸ್ತಾವನೆ ಕಳುಹಿಸಿದ್ದಾರೆ ಅದಕ್ಕೆ ಅನುಗುಣವಾಗಿ ಹಣವನ್ನು ಬಿಡುಗಡೆ ಮಾಡಿ. ಅಷ್ಟು ಮಾಡುತ್ತೇವೆ ಎಂದು ಹೇಳಿ ತಮ್ಮಿಂದ ಒಂದು ಮಾತು ಬಂದರೆ ಮುಗಿಯಿತು.

ಛೇರ್ಮನ್: ಮಾನ್ಯ ಸಚಿವರೇ, ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಿ.

ಶ್ರೀ ಭೈರೇಗೌಡ: ಪರಿಶೀಲನೆ ಎಂದರೆ ಏನೂ ಆಗಿಲ್ಲ. ಹಣ ಕೂಡ ಬಿಡುಗಡೆ ಆಗಿಲ್ಲ. ಇದು ರಸ್ತೆ ಅಗಲ ಮಾಡುವ ಬಗ್ಗೆ ಇರುವುದು. ಪಾದಾಚಾರಿಗಳಿಗೆ, ವಾಹನಗಳಿಗೆ ತೊಂದರೆಯಾಗತಕ್ಕ ಜಾಗ. ಆದ್ದರಿಂದ ಇದನ್ನು ಅತೀ ಅವಶ್ಯಕವೆಂದೇ ತಿಳಿದುಕೊಂಡು ತೊಂದರೆಯಾಗತಕ್ಕ ಜಾಗ. ಆದ್ದರಿಂದ ಇದನ್ನು ಅತೀ ಅವಶ್ಯಕವೆಂದೇ ತಿಳಿದುಕೊಂಡು ಜಿಲ್ಲಾಧಿಕಾರಿಗಳು ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆ. ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಒಳ್ಳೆಯ ಕೆಲಸಕ್ಕಾದರೂ ಹಣವನ್ನು ಕೊಡುತ್ತೇವೆಂದು ದಯವಿಟ್ಟು ಹೇಳಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ: ಮಾನ್ಯ ಅಧ್ಯಕ್ಷರೇ, ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನ್ನು ನೋಡಬೇಕು. ಯಾವ ಹೆಡ್‌ನಲ್ಲಿ ಸಾವು ಪರಿಹಾರವನ್ನು ಕೊಡಬೇಕೆನ್ನುವುದನ್ನು ನೋಡಬೇಕು. ಅದನ್ನು ಪರಿಶೀಲನೆ ಮಾಡಿ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಛೇರ್ಮನ್: ಅದರ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಏಕ್‌ದಂ ಅವರು ಕೂಡ ಹಣವನ್ನು ಬಿಡುಗಡೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಪ್ರತಿಸಾರಿ ಸದನ ಸೇರಿದಾಗಲೂ ಕೂಡ ಸದಸ್ಯರಿಗೆ ಗಂಭೀರವಾದ ಉತ್ತರವನ್ನು ಕೊಡುವುದಕ್ಕೆ ಆಗದಿದ್ದಾಗ ಪರಿಶೀಲನೆ ಮಾಡುತ್ತೇನೆಂದು ಹೇಳುತ್ತಾರೆ. ಅದು ಪರಿಶೀಲನೆಯಲ್ಲೇ ಇರುತ್ತೆ. ನಮ್ಮ ಅವಧಿ ಮುಗಿದರೂ ಕೂಡ ಅದು ಪರಿಶೀಲನೆಯಲ್ಲೇ ಇರುತ್ತೆ.

ವಿಷಯ: (vi) ದಕ್ಷಿಣಕನ್ನಡ ಜಿಲ್ಲೆಯ ಪರಂಗಿಪೇಟೆ ಮಾರಿಪಳ್ಳಿ, ಅಮ್ಮೆಮೂರುಗಳ ಹೆದ್ದಾರಿಗಳಲ್ಲಿ ಕೊಲೆಯಾಗುತ್ತಿರುವುದು.

+ ಶ್ರೀ ಎನ್. ಯೋಗೀಶ್ ಭಟ್(ಮಂಗಳೂರು): ಮಾನ್ಯ ಅಧ್ಯಕ್ಷರೇ, ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಪರಂಗಿಪೇಟೆ ಕ್ಷೇತ್ರ ಅದೇ ರೀತಿ ಮಾರಿಪಳ್ಳಿ ಅಮ್ಮೆಮಾರು ಕ್ಷೇತ್ರ ಅಲ್ಲಿ ಪ್ರಕ್ಷುಬ್ಧ ವಾತಾವರಣ ಉಂಟಾಗಿದೆ. ಕಳೆದ ಹಲವು ವರ್ಷಗಳಿಂದ ವರ್ಷದಲ್ಲೇ ಮೂರು ನಾಲ್ಕು ಗಲಾಟೆಗಳಾದರೂ ಅಲ್ಲಿ ಇದ್ದೇ ಇದೆ. ಯಾವ ಸಂದರ್ಭದಲ್ಲಿ ಯಾರ ಮನೆಗೆ ಹಲ್ಲೆಯಾಗುತ್ತೋ ಎಂದು ಹೇಳುವುದಕ್ಕಾಗುವುದಿಲ್ಲ. ಯಾವ ವ್ಯಕ್ತಿಗಳನ್ನು ಕಡಿಯುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುವಂಥ ಕಾರುಗಳನ್ನು ನಿಲ್ಲಿಸಿ ಎಲ್ಲಿ ಖೂನಿ ಮಾಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಅಂಥ ಒಂದು ಪ್ರಕ್ಷುಬ್ಧ ವಾತಾವರಣ ದಕ್ಷಿಣ ಕನ್ನಡ ಜಿಲ್ಲೆಯ ಪರಂಗಿಪೇಟೆ ಕ್ಷೇತ್ರದಲ್ಲಿ ನಡೆದಿದೆ. ಮೊನ್ನೆ ತಾನೇ ಕೆಲವು ದಿವಸಗಳ ಹಿಂದೆ ಇದೇ ಮಾರ್ಚ್ ತಿಂಗಳು 10 ರಂದು ಒಂದು ಹಲ್ಲೆಯಾಯಿತು. 12ನೇ ತಾರೀಖು ಅದೇ ಗುಂಪಿನಿಂದ ಇನ್ನೊಂದು ಹಲ್ಲೆ ನಡೆಯಿತು. ಒಂದೆಂದರೆ ಆನಂದ ಪಂಪದ ಎಂದು ಹೇಳುವ ವ್ಯಕ್ತಿ ಭೂತಕುಲದ ಪಾದ್ರಿ ಹಾಗೂ ಹೋಟೆಲ್ ಕೆಲಸ ಮಾಡುವ ಒಬ್ಬ ಸಾಮಾನ್ಯ ವ್ಯಕ್ತಿ. ಅವರು ರಾತ್ರಿ ಬರುವ ಸಂದರ್ಭದಲ್ಲಿ ಅವರ ಮೇಲೆ ಹಲ್ಲೆ ನಡೆಸಿ ಅವರ ಹೊಟ್ಟೆಗೆ ತಿವಿದು ಕರುಳನ್ನು ಹೊರಗೆ ಹಾಕಿದ್ದಾರೆ. ಅವರನ್ನು ಈಗಾಗಲೇ ಪಾದರಮಲ್ ಆಸ್ಪತ್ರೆಗೆ ಸೇರಿಸಿ ಟ್ರೀಟ್‌ಮೆಂಟ್ ಕೊಡಿಸಿದ್ದಾರೆ. ಸುಮಾರು ಹತ್ತು ಸಾವಿರ ರೂಪಾಯಿಗಳಿಗೂ ಹೆಚ್ಚು ಮೆಡಿಕಲ್ ಬಿಲ್ ಈಗಾಗಲೇ ಆಗಿದೆ. ಎರಡನೇ ವ್ಯಕ್ತಿ ಮೊಂಡಪ್ಪಪೂಜಾರಿ ಎನ್ನುವವರು. ಅವರ ಕುತ್ತಿಗೆಯನ್ನು ಕಡಿಯುವ ಪ್ರಯತ್ನವಾಗಿತ್ತು. ಅದೃಷ್ಟವಶಾತ್ ಅವರು ಆ ಒಂದು ದುರಂತದಿಂದ ಪಾರಾಗಿದ್ದಾರೆ. ಅವರು ಕೂಡ ಒಬ್ಬ ಸಾಮಾನ್ಯ ವ್ಯಕ್ತಿ. ಅವರು ಕೂಡ ತಮ್ಮಕೆಲಸ ಮುಗಿಸಿಕೊಂಡು ಮನೆಗೆ ಬರುವ ಸಂದರ್ಭದಲ್ಲಿ ಈ ಹಲ್ಲೆಯನ್ನು ಮಾಡಿದ್ದಾರೆ. ಈಗಾಗಲೇ ಆಗಿರುವ ಟ್ರೀಟ್‌ಮೆಂಟ್‌ನಿಂದ 16 ಸಾವಿರ ರೂಪಾಯಿಗಳಿಗೂ ಹೆಚ್ಚು ಖರ್ಚಾಗಿದೆ. ಮೂರನೇ ವ್ಯಕ್ತಿ ದಾಮೋದರ ಪಟ್ಟಾರಿ. ದೇವರ ಪಲ್ಲಕ್ಕಿಯನ್ನು ಹೊರುವ ಕೂಲಿ ಕೆಲಸ ಮಾಡುವಂಥ ವ್ಯಕ್ತಿ. ಇವರ ಕೈಯನ್ನು ಕಡಿದು, ಹೊಟ್ಟೆಯನ್ನು ಸಿಗಿದು ದೇಹದ ಎಲ್ಲಾ ಭಾಗಗಳನ್ನು ತಿವಿದು